



# ಚೀನೀಯರ ಹೊಸ ವರ್ಷ
# ಗೊಂಗ್ ಝಿ ಫಾ ಚೈ

ಚೀನೀಯರ ಸಾಂಪ್ರದಾಯಿಕ ಹೊಸವರ್ಷಾಚರಣೆ ಕಳೆಗಟ್ಟಿದೆ. ಶುಭವನ್ನು ಅರಸಿ ಹಾರೈಸುವ ಈ ಸಂಭ್ರಮ ಹಲವು ದಿನಗಳ ಉತ್ಸವದಂತೆ ಕಂಗೊಳಿಸುವುದು ಸ್ವಪ್ನ ಲೋಕವೇ ಧರೆಗಿಳಿದು ಬಂದಂತೆ ಕಾಣಿಸುತ್ತದೆ.

■ ಸೀಮಾ ಕುಲಕರ್ಣಿ





ಚೀನೀ ಭಾಷೆಯಲ್ಲಿ 'ಗೊಂಗ್ ಝಿ ಫಾ ಚೈ' ಎಂದರೆ ಹೊಸ ವರ್ಷದ ಶುಭಾಶಯ. ಹೊಸ ವರ್ಷವು ಸುಖ ಸಮೃದ್ಧಿಗಳನ್ನು ತರಲಿ ಎನ್ನುವ ಆಕಾಂಕ್ಷೆ. ಒಂದು ರೀತಿಯಲ್ಲಿ ಹಿಂದೂಗಳಿಗೆ ಯುಗಾದಿ ಪಾಡ್ಯ ಇದ್ದಂತೆ, ಸಿಖ್ಖರಿಗೆ ಬೈಸಾಖಿ ಇದ್ದಂತೆ, ಕ್ರೈಸ್ತರಿಗೆ ಜನವರಿ 1ರಂತೆ, ಚೀನೀಯರ ನವ ವರ್ಷದ ಮೊದಲ ದಿನವನ್ನು ಈ ವರ್ಷ ಚೀನ ದೇಶ, ಮಲೇಷ್ಯಾ, ಸಿಂಗಪುರ, ಹಾಂಗ್‌ಕಾಂಗ್ ಮಾತ್ರವಲ್ಲದೆ ಜಗತ್ತಿನಾದ್ಯಂತ ನೆಲೆಸಿರುವ ಚೀನೀ ಸಮುದಾಯಗಳಲ್ಲಿ ಫೆಬ್ರುವರಿ 17ರಂದು ಹೊಸ ದಿನವನ್ನು ಸಂಭ್ರಮದಿಂದ ಆಚರಿಸುವುದು ವಾಡಿಕೆ. ಆ ಖುಷಿ ಒಂದು ದಿನಕ್ಕೆ ಮುಗಿಯುವಂತಹದ್ದಲ್ಲ. ಮುಂದಿನ ಹದಿನೈದು ದಿನಗಳವರೆಗೆ ಸಡಗರ ಮುಂದುವರಿಯುತ್ತದೆ. ಈ ಹಬ್ಬವನ್ನು ವಸಂತೋತ್ಸವದ ಆಚರಣೆ ಎಂದೂ ಕರೆಯುತ್ತಾರೆ. ಉಳಿದೆಲ್ಲ ಹಬ್ಬಗಳಿಗಿಂತ ಚೀನೀಯರಿಗೆ ಅತ್ಯಂತ ಮಹತ್ವದ ದೊಡ್ಡ ಹಬ್ಬ. ಪ್ರಾಣಿ, ಪಕ್ಷಿಗಳ ಚಿಹ್ನೆಗಳುಳ್ಳ ಹನ್ನೆರಡು ವರ್ಷಗಳ ಚಕ್ರವು ತಿರುಗಿದಂತೆ ಒಂದೊಂದು ಪಕ್ಷಿ, ಪ್ರಾಣಿ ಆಯಾ ವರ್ಷದ ಶುಭದ ಚಿಹ್ನೆಯಾಗಿ ಬರುತ್ತವೆ. 2026ರ ಶುಭ ಚಿಹ್ನೆ ಕುದುರೆಯಾಗಿರುತ್ತದೆ ಎನ್ನುವುದು ನಂಬಿಕೆ.




ಪ್ರಪಂಚದಾದ್ಯಂತದ ಚೀನೀ ಸಮುದಾಯಗಳಲ್ಲಿ ಸಾಮಾನ್ಯವಾಗಿ ಹೊಸ ವರ್ಷವನ್ನು ಸ್ವಾಗತಿಸುವ ತಯಾರಿ ಮೂರು ವಾರಗಳ ಮುಂಚೆಯೇ ಆರಂಭವಾಗುತ್ತದೆ. ಮನೆ ಮನೆಗಳಲ್ಲಿ, ಬೀದಿಗಳಲ್ಲಿ ವರ್ಣಮಯ ವಾತಾವರಣ ತುಂಬಿ ತುಳುಕುತ್ತಿರುವಂತೆ ಭಾಸವಾಗುತ್ತದೆ. ಹಬ್ಬಕ್ಕೆ ಬೇಕಾಗುವ ಅಗತ್ಯ ವಸ್ತುಗಳ ಮಾರಾಟ ಭರಾಟೆಯಿಂದ ನಡೆಯುತ್ತದೆ. ಮನೆ, ಅಂಗಡಿಗಳು, ಉಪಾಹಾರ ಗೃಹಗಳು, ಕಚೇರಿಗಳ ಬಾಗಿಲಿನ ಎರಡೂ ಬದಿಗಳಲ್ಲಿ ಪುಟಾಣಿ ಕಿತ್ತಳೆಹಣ್ಣು ಸುರಿದ ಗಿಡಗಳನ್ನು ಇಡಲಾಗುತ್ತದೆ. ಈ ಗಿಡಗಳು ಸಮೃದ್ಧಿ ಮತ್ತು ಸಂತೋಷದ ಸೂಚಕ ಎನ್ನಲಾಗುತ್ತದೆ. ಚೀನೀಯರ ಜನಸಂಖ್ಯೆ ಗಣನೀಯವಾಗಿರುವ ನಗರಗಳಲ್ಲಿ, ವಸತಿ ಸಂಕೀರ್ಣಗಳಲ್ಲಿ ಮತ್ತು ವ್ಯಾಪಾರಿ ಮಳಿಗೆಗಳಲ್ಲಿ ಅಪ್ರತಿಮ ಕೌಶಲ ಹಾಗೂ ಕಲಾತ್ಮಕ ಸಾಂಪ್ರದಾಯಿಕ ಸಿಂಹದ ನೃತ್ಯ ಮತ್ತು ಡ್ರ್ಯಾಗನ್ ನೃತ್ಯಗಳನ್ನು ಪ್ರದರ್ಶಿಸುತ್ತಾರೆ. ಈ ನೃತ್ಯ ಹೊಸ ವರ್ಷದುದ್ದಕ್ಕೂ ಅದೃಷ್ಟ ಮತ್ತು ಸಮೃದ್ಧಿ ತರುತ್ತದೆ ಎಂಬುದು ಚೀನೀಯರಲ್ಲಿ ತಲತಲಾಂತರಗಳಿಂದ ಬಂದ ನಂಬಿಕೆ. ಈ ನೃತ್ಯಕ್ಕೆ ಹಿಮ್ಮೇಳದಂತೆ ಬಾರಿಸುವ ವಿಶೇಷ ತಾಳಮದ್ದಳೆ, ಮತ್ತು ಕಂಸಾಳೆಗಳಿಂದ ಒಡಗೂಡಿದ ವಿಶಿಷ್ಟ ಸಂಗೀತ ಇರುತ್ತದೆ. ಇದು ಕೆಟ್ಟ ಶಕುನ, ದೆವ್ವ ಭೂತಗಳ ಕಾಟ ಮತ್ತು ಸಂಭಾವ್ಯ ದುರದೃಷ್ಟಗಳನ್ನು ಹೊಡೆದೋಡಿಸುತ್ತದೆ ಎನ್ನುವ ಪ್ರತೀತಿಯಿದೆ. ಸಿಂಗಪುರ, ಮಲೇಷ್ಯಾದ ನಗರಗಳಲ್ಲಿನ 'ಚೈನಾ ಟೌನ್' ಹೊಸ ವರ್ಷದ ಸ್ವಾಗತಕ್ಕಾಗಿ ವರ್ಣರಂಜಿತ ಬೆಳಕಿನಿಂದ ಅಲಂಕಾರಗೊಂಡಿರುತ್ತದೆ. ಚೀನಾದಲ್ಲಂತೂ ಪ್ರತಿ ಹಳ್ಳಿ,